ತಾರೀಖಿನ ದಿನ ಡಿಸ್ಟ್ರಿಕ್ಟ್ ಡೆಪ್ಯೂಟಿ
ಕಮ್ಮಿಷನರವರ ಆಫಿಸಿನಲ್ಲಿ ನಮಗಳ ರೂಬರೂ ರುಜು ವ ಮೊಹರ್ ನಿಸಿ ಪೊಪ್ಪಿಸಲ್ಪಟ್ಟಿರುತ್ತೆ.
ಸಾಕ್ಷಿಗಳು.

1.
2.
3.

ಲೈಸೆನ್ಸ್‌ದಾರ್ ವ ಬಿಕರೀದಾರ್.

ಹುಕುಂ ಬವೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಿಟೆರಿ.

ಮುಜರಾಯಿ ಇಲಾಖೆ.

ನೋಟಿಫಿಕೇಷನ್.

ನಂ. 442. ತಾರೀಖು 18ನೇ ಸೆಪ್ಟಂಬರ್ 1896ನೇ ಇಸವಿ, ಬೆಂಗಳೂರು.

ಕೊಲ್ಲೇಪ್ಯಾಟೆ ಸಬ್ ತಾಲ್ಲೂಕಿನಲ್ಲಿರುವ ರಾಮಗಿರಿ ಶ್ರೀರಾಮದೇವರ ದೇವಸ್ಥಾನಕ್ಕೆ ಮೊಕರರಾಗಿ ಇದ್ದ ಧರ್ಮದರ್ಶಿಗಳ ಪೈಕಿ (1) ಛವತಿಯಾದ ಲಿಂಗಣ್ಣಯ್ಯಗೆ ಬದಲಾಗಿ ಕನ್ನಡ ಸ್ಕೂಲ್ ಹೆಡ್ಮಾಸ್ಟರ್ ಸೂರಪ್ಪನವರನ್ನೂ (2) ಹಾಲಿ ಗೈರ್ ಹಾಜರಾಗಿರುವ ಕುಪ್ಪಸಾಮಿ ಮೊದಲಿಯಾರ್‌ವರಿಗೆ ಬದಲಾಗಿ ಕೊಲ್ಲೇಪ್ಯಾಟೆ ನಾರಾಯಣಸ್ವಾಮಿ ಮೊದಲಿಯಾರ್‌ವರನ್ನೂ ಸಹ ಧರ್ಮದರ್ಶಿಗಳಾಗಿ ನೇಮಿಸಿ ಇದೆ.

ನಂ. 476. ತಾರೀಖು 22ನೇ ಸೆಪ್ಟಂಬರ್ 1896, ಬೆಂಗಳೂರು.

ಮಾಗಡಿ ತಾಲ್ಲೂಕು ತಿರುಮಲೆಯಲ್ಲಿರುವ ಶ್ರೀರಂಗನಾಥಸ್ವಾಮಿಯವರ ದೇವಸ್ಥಾನಕ್ಕೆ ಈ ಕೆಳಗೆ ನಮೂದಿಸುವವರನ್ನು ಈ ಲಾಗಾಯತು ಯರಡು ವರುಷಗಳ ಪರ್ಯಂತ ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ.

1. ತಿರುಮಲೆಯಲ್ಲಿರುವ ಪೆರ್ಷ್ ಶೇಕದಾರ್ ರಂಗಂಣನವರು.
2. ಮ್ಯೂನಿಸಿಪಲ್ ಮೆಂಬರ್ ಸೂರಪ್ಪನವರು.

ನಂ. 477.

ಕೊಲ್ಲೇಪೇಟೆ ಸಬ್ ತಾಲ್ಲೂಕು ಬಿಡದಿಯಲ್ಲಿರುವ ಛತ್ರಕ್ಕೆ ನೇಮಿಸಿ ಇದ್ದ ಧರ್ಮದರ್ಶಿಗಳ ಪೈಕಿ ಕಾಳಪ್ಪನೆಂಬವರು ಛವತಿಯಾದ ಸಬಬು ಅವರಿಗೆ ಬದಲಾಗಿ ಬಿಡದಿ ಗಂಗಕಟ್ಟೆರನ್ನ ಈ ಲಾಗಾಯತು 2 ವರುಷಗಳ ಪರ್ಯಂತರ ಧರ್ಮದರ್ಶಿಯಾಗಿ ನೇಮಿಸಿ ಇದೆ.

ಏ. ಶ್ರೀನಿವಾಸಾಚಾರು,
ಮುಜರಾಯಿ ಸೂಪರ್‌ಟೆಂಡೆಂಟ್ ಮತ್ತು ಸೆಕ್ರಿಟೆರಿ.

ಪಬ್ಲಿಕ್‌ವರ್ಕ್ಸ್.

ಇನ್ಸ್ಟ್ರಿಹಾರ್‌ನಾಮಾ.

ತಾರೀಖು 23ನೇ ಸೆಪ್ಟಂಬರ್ 1896.

ನಂ. 809.—5065, ಹೆಸರಘಟ್ಟದ ವಾಟರ್ ಸಪ್ಲೈ ಡಿವಿಜ್ ಎಗ್ಜಿಕ್ಯೂಟಿವ್ ಇಂಜಿನಿಯರ್ ಮೆಸ್ಸರ್ ಆರ್. ಟಿ. ಸ್ಕಾಲ್ಡ್‌ವೆಲ್ ಯವರಿಗೆ ಬರುವ ತಿಂಗಳ ಗುರ್ತೀ ತಾರೀಖು ಲಾಗಾಯತು ಯಾ ಆವರು ಹೊರಟ ತಾರೀಖಿನಾರಭ್ಯ ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬವೋಜೀಬ್,
ಸಿ. ಬರ್ಡ್, ಕರ್ನಲ್,
ಮೈಸೂರ ಗವರ್ನ್‌ಮೆಂಟ್ ಪಬ್ಲಿಕ್‌ವರ್ಕ್ಸ್ ಇಲಾಖಾ ಸೆಕ್ರಿಟೆರಿ.